

ಈಗ ಬದಲಾಗಿದೆ. ಸಣ್ಣ ಒಡವೆಯಾದರೂ ಸರಿ, ತಿಜೋರಿಯಲ್ಲಿ ವಜ್ರದ ಒಡವೆ ಒಂದು ಇರಲೇಬೇಕು ಎಂಬ ಹಂಬಲ ಅನೇಕರದ್ದು.

ಕಾಠಿಣ್ಯ ಎಂಬುದು ವಜ್ರದ ಗುಣ. ಆದರೆ ಈ ಹರಳು, ಗುಣದಲ್ಲಿ ಕಠಿಣವಾದರೂ ಬದಲಾವಣೆಗಳಿಗೆ ಒಡ್ಡಿಕೊಳ್ಳುವ ಗುಣವನ್ನೂ ಹೊಂದಿದೆ. ಆರ್ಥಿಕತೆಯ ವಿಚಾರ ಬಂದಾಗ ಗ್ರಾಹಕರ ಹೊಸ ಕಲ್ಪನೆಗಳಿಗೆ ವಜ್ರ ಸ್ಪಂದಿಸುತ್ತಿದೆ, ಅತಿ ದುಬಾರಿತನ ಬಿಟ್ಟು, ತುಸು ಮೃದು ಧೋರಣೆ ತಾಳುತ್ತಿದೆ ಎಂಬುದು ಮಹಿಳೆಯರಿಗೆ ಸಮಾಧಾನಕರ ಅಂಶ.

ವಜ್ರದಲ್ಲಿ ಹಲವು ವೈವಿಧ್ಯಗಳಿವೆ. ಉಡುಪಿಗೆ ಮ್ಯಾಚಿಂಗ್ ಮಾಡಲೆಂದೇ ಕಲರ್ ಡೈಮಂಡ್ ಬಂದಿದೆ. ಆದರೂ ಅತ್ಯಂತ ಪಾರದರ್ಶಕವಾಗಿರುವ ವಜ್ರದ ಹರಳು ಬಳಕೆಗೆ ಶ್ರೇಷ್ಠ ಎಂಬುದು ಆಭರಣ ತಜ್ಞರ ಅಭಿಮತ.

## ಜನಪ್ರಿಯತೆಯ ಹಾದಿಯಲ್ಲಿ...

ವಜ್ರದ ಹರಳನ್ನು ಚಿನ್ನದ ಒಡವೆ ಜತೆಗೆ ಸುಲಭವಾಗಿ ಜೋಡಿಸಿ ಆಕರ್ಷಕವಾಗಿ ವಿನ್ಯಾಸ ಮಾಡಬಹುದು. ಹೀಗಾಗಿ ಈಗೀಗ ಮಹಿಳೆಯರು ಹಗುರವಾದ 'ಸಿಂಗಲ್ ಪೀಸ್ ಆರ್ನಮೆಂಟ್' ಮೇಲೇ ಹೆಚ್ಚಿನ ಒಲವು ತೋರಿಸಲಾರಂಭಿಸಿದ್ದಾರೆ. ಒಟ್ಟಿನಲ್ಲಿ ಮಹಿಳೆಯರ 'ಫ್ಯಾಷನಬಲ್' ಆಗಿರಬೇಕು ಎಂಬ ತವಕವನ್ನು ವಜ್ರದ ವರ್ತಕರು ಪೂರೈಸುತ್ತಿದ್ದಾರೆ.

'ವಜ್ರದ ಒಡವೆಯಲ್ಲಿ 'ಗ್ಲೋಬಲ್ ಡಿಸೈನ್' ಬಹಳ ಜನಪ್ರಿಯ. ವಜ್ರಾಭರಣದಲ್ಲಿ ಈಗ ನವಿಲಿನ ವಿನ್ಯಾಸ, ಸೆವೆನ್ ಸ್ಟೋನ್ ಡಿಸೈನ್ ಹೊಸ ಟ್ರೆಂಡ್. ಮದುವೆ ಸಂದರ್ಭಕ್ಕಾಗಿ ಮಲ್ಟಿಪರ್ಪಸ್ ಜ್ಯುವೆಲ್ಲರಿಗಳೂ ಲಭ್ಯ. ವಧುವಿಗಾಗಿಯೇ ವಿಶೇಷವಾಗಿ ರೂಪಿಸಿದ ವಜ್ರಾಭರಣಗಳು ಇಂದಿನ ಟ್ರೆಂಡ್‌ಗೆ ತಕ್ಕಂತೆ ಹಲವು ವಿನ್ಯಾಸಗಳಲ್ಲಿ ಲಭ್ಯ. ಸ್ಪಾರ್ಕ್ಲಿಂಗ್ ಡೈಮಂಡ್, ಸ್ಟೇಟ್‌ಮೆಂಟ್ ಪೀಸ್ ಮದುಮಗಳ ಅಲಂಕಾರಕ್ಕಾಗಿಯೇ ರೂಪಿಸಿದಂಥವು' ಎನ್ನುತ್ತಾರೆ ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ವಜ್ರದ ಒಡವೆ ಮಳಿಗೆಯ ಮಾಲಿಕ ಚಂದನಲಾಲ್.

> ವಜ್ರದ ಒಡವೆಯಲ್ಲಿ ನಾಲ್ಕು ಪ್ರಮುಖ ಮೌಲ್ಯಾಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ವಿನ್ಯಾಸ ಮಾಡಲಾಗುತ್ತದೆ. ಕಟ್, ಕಲರ್, ಕ್ಲ್ಯಾರಿಟಿ ಹಾಗೂ ಕ್ಯಾರಟ್ ಎಂಬ ನಾಲ್ಕು 'ಸಿ' ಬಹಳ ಮುಖ್ಯವಾದದ್ದು.

'ನಕ್ಷತ್ರದ ವಿನ್ಯಾಸ ಅತ್ಯಂತ ಹಳೆಯ ವಿನ್ಯಾಸ ಮಾದರಿ. ಸೆವೆನ್ ಸ್ಟೋನ್ ಕಾನ್ಸೆಪ್ಟ್ ಆಗಿರುವ ಈ ಒಡವೆ 1938ರಿಂದಲೇ ಚಾಲ್ತಿಯಲ್ಲಿತ್ತು. ಈಗಲೂ ಅದೇ ಬೇಡಿಕೆ, ಜನಪ್ರಿಯತೆ ಉಳಿಸಿಕೊಂಡಿದೆ. ಸಿಂಗಲ್ ಎಡಿಷನ್, ಸಿಗ್ನೇಚರ್ ಡಿಸೈನ್ ಮಹಿಳೆಯರ ಮನ ತಣಿಸುತ್ತಿದೆ. ಸಮಕಾಲೀನ ವಿನ್ಯಾಸದ ಟ್ರೆಂಡಿ ಆಭರಣವನ್ನು ಸಣ್ಣವಯಸ್ಸಿನ ಹುಡುಗಿಯರು ಖರೀದಿಸಿದರೆ, ಸಾಂಪ್ರದಾಯಿಕ ಒಡವೆಗಳನ್ನು ಶೇ.60ರಷ್ಟು ಮಹಿಳೆಯರು ಇಷ್ಟಪಡುತ್ತಾರೆ' ಎನ್ನುತ್ತಾರೆ ಅವರು.

'ಮದುಮಗಳು ಯಾವತ್ತೂ ಬಯಸುವ ಅತ್ಯಂತ ಹೊಳಪುಳ್ಳ ಒಡವೆ ಎಂದರೆ ಅದು 'ಸ್ಪಾರ್ಕ್ಲಿಂಗ್ ಡೈಮಂಡ್'. ವಜ್ರ ಮತ್ತು ಎಮರಾಲ್ಡ್‌ಗಳನ್ನು ಬಳಸಿ ವಿನ್ಯಾಸ ಮಾಡುವ ಈ ಒಡವೆ ಕ್ಲಾಸಿಕ್ ಫ್ಯಾಷನ್ ಆಗಿದೆ. ನೆಕ್ಲೇಸ್ ಮತ್ತು ಜುಮ್ಕಾಗಳು ಕಡು ಬಣ್ಣದ ರೇಷ್ಮೆಸೀರೆಗಳಿಗೆ ಅತ್ಯಂತ ಸೂಕ್ತವಾದದ್ದು' ಎಂಬುದು ಚಂದನಲಾಲ್ ಅಭಿಪ್ರಾಯ.

## ಮಲ್ಟಿಪರ್ಪಸ್ ಆಭರಣ

ವಜ್ರದಲ್ಲಿ ಮಲ್ಟಿಪರ್ಪಸ್ ಆಭರಣ ಇದೀಗ ಹೊಸ ವಿನ್ಯಾಸದಲ್ಲಿ ಬಂದಿದೆ. ಇದು ಸಿಂಗಲ್‌ಪೀಸ್ ಆರ್ನಮೆಂಟ್ ಆಗಿದ್ದು, ಒಂದೇ ಆಭರಣವನ್ನು ಹಾರವಾಗಿ, ಕಿವಿಯೋಲೆ ಆಗಿ, ಬ್ರೇಸ್‌ಲೆಟ್ ಆಗಿ ಮತ್ತು ಸರವಾಗಿ ಬಳಸಬಹುದು. ಇದರಲ್ಲಿ 'ಕ್ಲಾಸಿಕ್ ಡಿಸೈನ್ ವಜ್ರದ ಒಡವೆಯಲ್ಲಿ ಸಿಗುತ್ತಿದೆ. ಅಲ್ಲದೆ ಹೂವಿನ ವಿನ್ಯಾಸ, ದೇವಾನುದೇವತೆಗಳ ಪ್ರತಿರೂಪ, ನವಿಲಿನ ವಿನ್ಯಾಸ ವಜ್ರದ ಒಡವೆಯಲ್ಲಿ ಒಡಮೂಡಿದೆ. ಇದು ಮಹಿಳೆಯರನ್ನು ಸಖತ್ ಸೆಳೆಯುತ್ತಿದೆ.



## ಹೂವಿನಂತೆ ಅರಳುವ ಸೀಕ್ರೆಟ್ ರಿಂಗ್

'ಸಿಕ್ರೇಟ್ ರಿಂಗ್'. ಇದನ್ನು ಕೈಗೆ ತೊಟ್ಟ ಕೂಡಲೇ ಮೊಗ್ಗಿನಂತೆ ಮುದುಡಿದ್ದ ಉಂಗುರ ಹೂವಿನ ಆಕಾರದಲ್ಲಿ ಅರಳುತ್ತದೆ. ಈ ಅದ್ಭುತ ವಜ್ರದುಂಗುರ ಆಭರಣ ಲೋಕದಲ್ಲಿ ಹೊಸದು.

ವಜ್ರದ ಆಭರಣಗಳು ಸಂಗ್ರಹಯೋಗ್ಯ. ಈ ಆಭರಣ ಅಂದಗೆಡುವುದಿಲ್ಲ. ಎಷ್ಟು ಬಾರಿ ಬಳಸಿದರೂ ಹಳತಾಗುವುದೇ ಇಲ್ಲ. ಮದುವೆ, ಮುಂಜಿ ಮುಂತಾದ ಶುಭ ಸಮಾರಂಭಗಳಿಗೆ, ಪಾರ್ಟಿ, ಔತಣಕೂಟದಂತಹ ಸಮಾರಂಭಗಳಿಗೆ ಹೋಗುವಾಗ ಒಂದೇ ಒಂದು ವಜ್ರದ ನೆಕ್ಲೆಸ್ ತೊಟ್ಟರೂ ಅದು 'ಗ್ರ್ಯಾಂಡ್ ಲುಕ್'ಅನ್ನೇ ಕೊಡುತ್ತದೆ.